International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

# ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ : ಒಂದು ವಿಶ್ಲೇಷಣೆ

**ಬಾಬು. ಕೆ. ಎಂ**

**ಸಂಶೋಧನಾ ವಿದ್ಯಾರ್ಥಿ**

**ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ**

**ಮತ್ತು**

**ಡಾ. ಈ. ತಿಪ್ಪೇಸ್ವಾಮಿ**

**ಸಹ ಪ್ರಾಧ್ಯಾಪಕರು**

**ಫೀ. ಮಾ. ಕೆ. ಎಂ. ಕಾರ್ಯಪ್ಪ ಕಾಲೇಜು**

ಮಡಿಕೇರಿ–**571201. ಕೊಡಗು ಜಿಲ್ಲೆ, ಕರ್ನಾಟಕ**

**ಪೀಠಿಕೆ:**

ಕೃಷಿತೋ ನಾಸ್ತಿ ದುರ್ಭಿಕ್ಷಂ... ಕೃಷಿ ಇಲ್ಲದಿದ್ದರೆ ಏನು ಇಲ್ಲ ಎಂಬಂತೆ ಎಲ್ಲದಕ್ಕೂ ಮೂಲ ಬುನಾದಿ ಕೃಷಿ ಮತ್ತು ಕೃಷಿ ಉತ್ಪನ್ನಗಳು ಬೇಸಾಯವಿಲ್ಲದೆ ಏನಿಲ್ಲ. ಜಿಡಿಪಿ ಲೆಕ್ಕದಲ್ಲಿ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳು ಮುಂದಿದ್ದರೂ, ಆ ಎರಡೂ ಕ್ಷೇತ್ರಗಳಿಗೆ ಅಷ್ಟೇ ಏಕೆ ಬಹುತೇಕ ಕ್ಷೇತ್ರಗಳಿಗೆ ಬೇಕಾಗುವ ಕಚ್ಚಾ ಸರಕುಗಳನ್ನು ಒದಗಿಸುವುದು ಮುಕ್ಕಾಲು ಭಾಗ ಕೃಷಿ ಕ್ಷೇತ್ರವೇ ಆಗಿದೆ. ಭಾರತವು ಕೃಷಿ ಪ್ರಧಾನವಾದ ದೇಶವಾಗಿದ್ದು ಕೃಷಿಯೇ ದೇಶದ ಬೆನ್ನೆಲುಬು ಮತ್ತು ಜೀವಾಳವಾಗಿದೆ. ಮಹತ್ಮಾ ಗಾಂಧೀಜಿಯವರು ಹೇಳಿದಂತೆ ದೆಶದ ಅಭಿವೃದ್ಧಿಯು ಕೃಷಿಯ ಅಭಿವೃದ್ಧಿಯನ್ನು ಪೂರ್ಣವಾಗಿ ಅವಲಂಭಿಸಿದೆ. ಭಾರತದ ಕೃಷಿಯು ಶೇಕಡ 60 ರಷ್ಟು ಮಳೆ ಆಶ್ರಿತವಾಗಿದೆ. ಆದ್ದರಿಂದ ಇದು ನಿಸರ್ಗದ ಆಶ್ರಯದಲ್ಲಿದೆ ಎಂದರೆ ತಪ್ಪಾಗುವುದಿಲ್ಲ. ಹಿಗಾಗಿ ಭಾರತದ ಕೃಷಿಯು ಅನೇಕ ನೈಸರ್ಗಿಕ ವಿಕೋಪಗಳಿಗೆ ಹಲವಾರು ಬಾರಿ ತುತ್ತಾಗಿರುವುದನ್ನು ಮತ್ತು ತುತ್ತಾಗುತ್ತಿರುವುದನ್ನು ಕಂಡಿದ್ದೇವೆ. ಇದಲ್ಲದೆ ಯಾವುದೇ ಉತ್ಪಾದಕ ತಾನು ಉತ್ಪಾದಿಸುವ ವಸ್ತುಗಳ ಮೇಲೆ ಮತ್ತು ಅವುಗಳ ಮಾರಟದ ಮೇಲೆ ಸರಿಯಾದ ನಿಯಂತ್ರಣ ಹೊಂದಿರುವುದಿಲ್ಲವೋ ಅಂತಹ ಉತ್ಪಾದಕನ ಯಾವುದೇ ಪ್ರಯತ್ನ ಫಲಶೃತಿಯಾಗಲು ಕಷ್ಟಸಾಧ್ಯ. ಏಕೆಂದರೆ ಪ್ರತಿಯೊಂಬ್ಬ ಪ್ರಬಂಧಕ ತಾನು ಮಾಡುವ ಅರ್ಥಿಕ ಸಹಾಸ ಅವನು ಹೊಂದಿರುವ ಉತ್ಪಾದನೆ ಮತ್ತು ಮಾರಟ ವ್ಯವಸ್ಥೆಗಳ ಮೇಲೆ ಅವಲಂಭಿತವಾಗಿರುತ್ತದೆ. ಇದು ರೈತರಿಗೆ ಸಹ ಅನ್ವಯಿಸುತ್ತದೆ. ಭಾರತದ ರೈತ ತಾನು ಉತ್ಪಾದಿಸುವ ಯಾವುದೇ ವಸ್ತವಿನ ಉತ್ಪಾದಕತೆಯ ಮೇಲೆ ನಿಯಂತ್ರಣ ಹೊಂದಿಲ್ಲ ಮತ್ತು ಮಾರಟದ ಮೇಲಂತ್ತೂ ನಿಯಂತ್ರಣ ಇಲ್ಲವೇ ಇಲ್ಲ. ಹೀಗಾಗಿ ಹಲವು ಸಮಸ್ಯೆಗಳನ್ನು ರೈತರು ಎದುರಿಸುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಅತಿವೃಷ್ಠಿಮ, ಅನಾವೃಷ್ಠಿ, ಬಿರುಗಾಳಿ, ಆಣೇಕಲ್ಲು ಮಳೆ, ಮಂಜು ಬೀಳುವಿಕೆ, ಕಿಟಬಾಧೆಗಳು,

ಪಕ್ಷಿಗಳಿಂದಾಗುವ ತೊಂದರೆಗಳು, ಅಲೆದಾಡುವ ಪ್ರಾಣಿಗಳ ಕಾಟ, ಇವುಗಳಲ್ಲದೇ ಇಳುವರಿಯಲ್ಲಿಯ ಹೊಯ್ದಾಟ ಸಮಸ್ಯೆ, ಬೆಳೆ ಸ್ಥಿರತೆಯ ಸಮಸ್ಯೆ, ಕೃಷಿ ಪರಿಕರಗಳ ಅನಿಶ್ಚಿತತೆ, ಯಂತ್ರೋಪಕರಣಗಳ ಕಾರ್ಯವಿಫಲತೆ ಹಾಗೂ ರೈತನಿಗಾಗುವ ದುರ್ಘಟನೆಗಳು, ರೈತನನ್ನು ಯಾವುದೇ ಯೋಜನೆ ಹಾಕಲು ಮತ್ತು ಕಾರ್ಯತತ್ಪರನಾಗಲು ಅಶಕ್ತನಾಗಿ ಮಾಡುತ್ತಿವೆ. ಈ ಎಲ್ಲ ಸಮಸ್ಯೆಗಳಲ್ಲಿ ಪ್ರಮುಖವಾಗಿ ಬೆಳೆಗಳ ಇಳುವರಿಯ ಸಮಸ್ಯೆಯೂ ಪ್ರಮುಖವಾಗಿ ಕಂಡುಬರುತ್ತಿದೆ. ಈ ಸಮಸ್ಯೆಯಿಂದ ಪರಿಹಾರ ಹೊಂದಲು ಸರ್ಕಾರ ಬೆಳೆ ವಿಮೆ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅನುಷ್ಠಾನಗೊಳಿಸಿದೆ.

**2. ಯೋಜನೆಯ ವಿವರ:**

ಕೃಷಿ ಮತ್ತು ಕಲ್ಯಾಣ ಸಚಿವಾಲಯದ ಬೆಂಬಲದೊಂದಿಗೆ ಜನವರಿ 13,2016 ರಂದು ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಅನುಷ್ಠಾನಗೊಳಿಸಲಾಯಿತು. ಇದನ್ನು ಭಾರತದ ಒಕ್ಕೂಟದಡಿಯಲ್ಲಿ ಬರುವ ಎಲ್ಲಾ ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯಗಳಲ್ಲಿ ಜಾರಿಗೊಳಿಸಲಾಗಿದೆ. ರೈತರಿಗೆ ಕಡಿಮೆ ಬೆಲೆಗೆ ಬೆಳೆವಿಮೆ ಒದಗಿಸುವುದೇ ಈ ಯೋಜನೆಯ ಬಹು ಮುಖ್ಯ ಉದ್ದೇಶ. ಇಲ್ಲಿಯವರೆಗೂ ಬೆಳೆ ವಿಮೆಯ ಪ್ರಿಮಿಯಂ ತುಂಬಾ ಅಧಿಕವಾಗಿದ್ದು ಮತ್ತು ನಿಜವಾಗಿಯೂ ದೇಶಿಯ ರೈತರು ಬೆಳೆ ವಿಮೆಯ ಪ್ರಯೋಜನೆಗಳನ್ನು ಪಡೆಯುವಲ್ಲಿ ವಿಫಲವಾಗಿದ್ದರು. ಹಾಗಾಗಿ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆನ್ನು ರೂ.17,600 ಕೋಟಿ ವೆಚ್ಚದೊಂದಿಗೆ ರೈತರ ಆದಾಯಕ್ಕೆ ಭದ್ರತೆ ನೀಡಲು ಆರಂಭಿಸಲಾಗಿದೆ. ಮುಂಗಾರಿನಲ್ಲಿ ಬೆಳೆ ವಿಮೆಯ ಪ್ರಿಮಿಯಂ ಶೇಕಡ 2 ರಷ್ಟು ಇದ್ದರೆ, ಹಿಂಗಾರಿನಲ್ಲಿ ಶೇಕಡ 1.5 ರಷ್ಟು ಇರುತ್ತದೆ. ತೋಟಗಾರಿಕಾ ಮತ್ತು ವಾಣಿಜ್ಯ ಬೆಳೆಗಳಿಗೆ ಪ್ರಿಮಿಯಂ ಒಟ್ಟು ವಿಮಾ ಮೌಲ್ಯದ ಶೇಕಡ 5 ರಷ್ಟಿರುತ್ತದೆ.

**3. ಕೃಷಿ ವಲಯದಲ್ಲಿ ಸುಸ್ಥಿರ ಉತ್ಪಾದನೆಯನ್ನು ಖಾತರಿ ಪಡಿಸಲು ಈ ಕೆಳಗಿನ ಉದ್ದೇಶಗಳನ್ನು.**

1) ಬೆಳೆಹಾನಿ ಸಂಭವಿಸಿದಲ್ಲಿ ರೈತರಿಗೆ ವಿಮೆ ಮತ್ತು ಅಪಾಯದ ರಕ್ಷಣೆ ಒದಗಿಸುವುದು.

2) ರೈತರ ಆದಾಯವನ್ನು ಸ್ಥಿರಗೊಳಿಸುವುದು ಮತ್ತು ಕೃಷಿ ಕ್ಷೇತ್ರಕ್ಕೆ ನಿರಂತರ ಸಾಲದ ಹರಿವನ್ನು ಖಚಿತಪಡಿಸಿಕೊಳ್ಳುವುದು.

3) ನವೀನ ಮತ್ತು ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ರೈತರನ್ನ ಉತ್ತೇಜಿಸುವುದು.

ಕೇಂದ್ರ ಸರ್ಕಾರವು 2016–17 ನೇ ಸಾಲಿನಿಂದ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಯನ್ನು ಜಾರಿಗೆ ತಂದಿದ್ದು ಮಾನ್ಯ ಮುಖ್ಯಮಂತ್ರಿಗಳು ಈ ಯೋಜನೆಯನ್ನು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ (ವಿಮೆ) ಯೋಜನೆ ಎಂಬ ಹೆಸರಿನಿಂದ ಕರೆಯಲು ಆದೇಶಿಸಿರುತ್ತಾರೆ.

**4. ಯೋಜನೆಯು ಹೇಗೆ ಕೆಲಸ ಮಾಡುತ್ತದೆ.**

ಈ ಯೋಜನೆ ಅಡಿಯಲ್ಲಿ ರೈತರು ಬೆಳೆ ವಿಮೆ ಖರೀದಿಸಿ ನಿಗದಿತ ಪ್ರೀಮಿಯಂ ಕಟ್ಟಬೇಕು. ಪ್ರೀಮಿಯಂ ಬೆಳೆ ಆಧಾರಿಸಿ ನಿಗದಿಯಾಗುತ್ತದೆ ಮತ್ತು ಇದನ್ನು ಬೀಜ ಬಿತ್ತನೆ ಕಾರ್ಯ ಪ್ರಾರಂಭ ಮುನ್ನವೇ ಮಾಡಬೇಕು. ವಿಮೆ ಖರೀದಿಯ ನಂತರ ತಮ್ಮ ಹೊಲಗದ್ದೆಗಳಲ್ಲಿ ರೈತರು ಎಂದಿನಂತೆ ತಮ್ಮ ಕೆಲಸ ಮುಂದುವರೆಸಬಹುದು. ಯಾವುದೇ ನೈಸರ್ಗಿಕ ವಿಕೋಪಗಳಿಂದ ಆಗಲಿ ಅಥವಾ ತಮ್ಮ ಕೈಮೀರಿದ ಯಾವುದೇ ಘಟನೆಗಳಿಂದ ಆಗಲಿ ಬೆಳೆ ಹಾನಿ ಸಂಭವಿಸಿದರೆ ರೈತರು ವಿಮೆ ಮಾಡಿದ ಮೊತ್ತವನ್ನು (ಸಮ್ ಅಶ್ಯೂರ್ಡ್ ಇನ್ಸೂರೆನ್ಸ್) ಕಂಪನಿಯಿಂದ ಪಡೆಯುತ್ತಾನೆ.

ಭಾರತದ ಬಹಳಷ್ಟು ರೈತರು ತಮ್ಮ ಅವಶ್ಯಕತೆಗಳಾದ ಬಿತ್ತನೆ ಬೀಜ, ಗೊಬ್ಬರ ಅಥವಾ ಇತರ ಕೃಷಿ ಉಪಕರಣಗಳನ್ನು ಖರೀದಿಸಲು ಸಾಲದ ಮೊರೆ ಹೋಗಿರುತ್ತಾರೆ. ಒಂದೊಮ್ಮೆ ಬೆಳೆ ನಾಶವಾದರೆ, ಆತ ತನ್ನ ಸಾಲವನ್ನು ತೀರಿಸಲಾಗದೇ ಒತ್ತಡದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುವುದರೆಡೆಗೆ ಹೆಜ್ಜೆ ಇಡುತ್ತಾನೆ. ಈ ಯೋಜನೆ ಅಡಿಯಲ್ಲಿ ರೈತನು ಬೆಳೆ ಹಾನಿಯಾದರೆ ನಿಗದಿತ ವಿಮೆ ಮಾಡಿದ ಮೊತ್ತವನ್ನು ಪಡೆಯುತ್ತಾನೆ ಮತ್ತು ಇದನ್ನು ಆತ ಸಾಲವನ್ನು ತೀರಿಸಲು ಉಪಯೋಗಿಸಬಹುದಲ್ಲದೆ ಇದು ಆತನ ಸಂಸಾರದ ಉಳಿವಿಗು ಕಾರಣವಾಗುತ್ತದೆ. ಈ ರೀತಿಯಲ್ಲಿ ರೈತನಿಗೆ ಬೆಳೆ ಹಾನಿಯಿಂದಾಗುವ ನಷ್ಟದ ಪ್ರಮಾಣ ಇಳಿಮುಖವಾಗುತ್ತದೆ ಮತ್ತು ಆತ ಉತ್ತಮ ಜೀವನ ನಡೆಸಲು ಸಹಕಾರಿಯಾಗುತ್ತದೆ. ಈ ಯೋಜನೆಯು ಬೆಳೆ ಸಾಲ ಪಡೆದ ರೈತರಿಗೆ ಕಡ್ಡಾಯ. ಬೆಳೆ ಸಾಲ ಪಡೆಯದ ರೈತರಿಗೆ ಐಚ್ಛಿಕ. ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯಾರ್ಥ ಪಡಿಸುವುದು ವಿಮಾ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 36 ಆಹಾರ, ಎಣ್ಣೆಕಾಳು ಮತ್ತು ವಾರ್ಷಿಕ ವಾಣಿಜ್ಯ ಹಾಗು ತೋಟಗಾರಿಕಾ ಬೆಳೆಗಳನ್ನು ಅಧಿ ಸೂಚಿಸಲಾಗಿದ್ದು, ಮುಂಗಾರು ಹಂಗಾಮಿಗೆ ಹೋಬಳಿ ಮತ್ತು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಸೂಚಿಸಲಾಗಿದೆ.

**2020 ಮುಂಗಾರು ಹಂಗಾಮಿನಲ್ಲಿ 36 ಆಹಾರ ಬೆಳೆಗಳನ್ನು ಈ ವಿಮೆಯ ವ್ಯಾಪ್ತಿಯಲ್ಲಿ ತರಲಾಗಿದೆ. ಅವುಗಳೆಂದರೆ**

ಭತ್ತ (ನೀರಾವರಿ/ಮಳೆ ಆಶ್ರಿತ), ಮುಸುಕಿನ ಜೋಳ(ನೀರಾವರಿ/ಮಳೆ ಆಶ್ರಿತ), ರಾಗಿ(ನೀರಾವರಿ/ಮಳೆ ಆಶ್ರಿತ), ಜೋಳ (ನೀರಾವರಿ/ಮಳೆ ಆಶ್ರಿತ), ಸಜ್ಜೆ (ನೀರಾವರಿ/ಮಳೆ ಆಶ್ರಿತ), ನವಣೆ (ಮಳೆ ಆಶ್ರಿತ), ಸಾವೆ (ಮಳೆ ಆಶ್ರಿತ),ಉದ್ದು (ಮಳೆ ಆಶ್ರಿತ), ತೊಗರಿ (ಮಳೆ ಆಶ್ರಿತ/ನೀರಾವರಿ), ಹೆಸರು (ಮಳೆ ಆಶ್ರಿತ), ಹುರುಳಿ (ಮಳೆ ಆಶ್ರಿತ), ಅಲಸಂದೆ (ಮಳೆ ಆಶ್ರಿತ), ಸೋಯಾ ಅವರೆ (ನೀರಾವರಿ/ಮಳೆ ಆಶ್ರಿತ), ಎಳ್ಳು (ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ/ಮಳೆ ಆಶ್ರಿತ), ನೆಲಗಡಲೆ (ಶೇಂಗಾ) (ನೀರಾವರಿ/ಮಳೆ ಆಶ್ರಿತ), ಹತ್ತಿ (ನೀರಾವರಿ/ಮಳೆ ಆಶ್ರಿತ), ಈರುಳ್ಳಿ (ನೀರಾವರಿ/ಮಳೆ ಆಶ್ರಿತ), ಆಲೂಗೆಡ್ಡೆ (ನೀರಾವರಿ/ಮಳೆ ಆಶ್ರಿತ), ಕೆಂಪು ಮೆಣಸಿನಕಾಯಿ (ನೀರಾವರಿ/ಮಳೆ ಆಶ್ರಿತ), ಟೊಮ್ಯಾಟೊ (ಅನಿರ್ಧಿಷ್ಟ), ಎಲೆಕೋಸು (ಅನಿರ್ಧಿಷ್ಟ), ಅರಿಶಿನ (ಅನಿರ್ಧಿಷ್ಟ) ವನ್ನು ಅಧಿಸೂಚಿಸಲಾಗಿದೆ.

**2020–21 ಹಿಂಗಾರು ಹಂಗಾಮಿನಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ ಮತ್ತು ಕೊಡಗು ಹೊರತುಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಮುಂಗಾರು ಹಂಗಾಮಿನಲ್ಲಿ 19 ಬೆಳೆಗಳಾದ**

ಭತ್ತ (ನೀರಾವರಿ), ಮುಸುಕಿನ ಜೋಳ (ನೀರಾವರಿ/ಮಳೆ ಆಶ್ರಿತ), ರಾಗಿ (ನೀರಾವರಿ/ಮಳೆ ಆಶ್ರಿತ), ಗೋಧಿ (ನೀರಾವರಿ/ಮಳೆ ಆಶ್ರಿತ), ಕಡಲೆ (ನೀರಾವರಿ/ಮಳೆ ಆಶ್ರಿತ), ಜೋಳ (ನೀರಾವರಿ/ಮಳೆ ಆಶ್ರಿತ), ಹುರುಳಿ (ಮಳೆ ಆಶ್ರಿತ), ಅಗಸೆ(ಮಳೆ ಆಶ್ರಿತ), ಕುಸುಮೆ (ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ/ಮಳೆ ಆಶ್ರಿತ), ನೆಲಗಡಲೆ(ಶೇಂಗಾ) (ಮಳೆ ಆಶ್ರಿತ) ಯನ್ನು ಅಧಿಸೂಚಿಸಲಾಗಿದೆ.

**2020–21 ಬೇಸಿಗೆ ಹಂಗಾಮಿನಲ್ಲಿ ರಾಜ್ಯದ 25 ಜಿಲ್ಲೆಗಳಲ್ಲಿ (ಉಡುಪಿ, ಬೀದರ್, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೊಡಗು ಹೊರತುಪಡಿಸಿ) ಅನುಷ್ಠಾನಗೊಳಿಸಲಾಗುತ್ತಿದ್ದು, 4 ಬೆಳೆಗಳಾದ.**

ನೆಲಗಡಲೆ(ಶೇಂಗಾ)(ನೀರಾವರಿ), ಭತ್ತ (ನೀರಾವರಿ), ರಾಗಿ (ನೀರಾವರಿ), ಸೂರ್ಯಕಾಂತಿ (ನೀರಾವರಿ) ಇವುಗಳನ್ನು ಅಧಿಸೂಚಿಸಲಾಗಿದೆ.

**ಈ ಯೊಜನೆಯನ್ನು ಕೆಳಗಿನ ವಿಮಾ ಸಂಸ್ಥೆಗಳಿಂದ ಅನುಷ್ಟನಗೊಳಿಸಲಾಗಿರುತ್ತದೆ. ಅವುಗಳೆಂದರೆ,**

- ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ
- ಯುನಿವರ್ಸಲ್ ಸೊಂಪೋ ವಿಮಾ ಸಂಸ್ಥೆ
- ಭಾರತಿ ಏಕ್ಸಾಮ್ ಜಿ.ಐ.ಸಿ (ಉಜಟಿಜಡಿಚಿಟ ಖಟಿಣಡಿಚಿಟಟಿಛಿಜ ಅಂಣಟಿಛಿಟ)
- ಬಜಾಜ್ ಅಲಿಯನ್ಸ್ ಜಿ.ಐ.ಸಿ.
- ಫ್ಯೂಚರ್ ಜನರಲ್ ಜಿ.ಐ.ಸಿ

**5. ಯೋಜನೆಯ ಅನುಷ್ಠಾನಕ್ಕೆ ಆದೇಶದಡಿ ನೀಡಿರುವ ನಿಬಂಧನೆಗಳು ಹಾಗೂ ಸೂಚನೆಗಳು:–**

ಈ ಯೋಜನೆ ಅಡಿ 2016ರ ಮುಂಗಾರು ಹಂಗಾಮಿನಲ್ಲಿ ಸ್ಥಳ, ನಿರ್ದಿಷ್ಟ, ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ, ಭೂಕುಸಿತ ಮತ್ತು ಬೆಳೆ ಮುಳುಗಡೆ ಇವುಗಳಿಂದ ಉಂಟಾಗುವ ನಷ್ಟದ ನಿರ್ಧಾರಣೆಯನ್ನು ವೈಯಕ್ತಿಕವಾಗಿ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಅಳವಡಿಸಿ

International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

ಅನುಷ್ಠಾನಗೊಳಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ. ಒಂದು ವೇಳೆ ಒಂದು ಅಧಿಸೂಚಿತ ಘಟಕದಲ್ಲಿ ಶೇಕಡಾ 25 ಕ್ಕಿಂತ ಹೆಚ್ಚು ವಿಸ್ತೀರ್ಣದಲ್ಲಿ ಬೆಳೆ ನಷ್ಟವಾದರೆ, ಆ ಅಧಿಸೂಚಿತ ಘಟಕದಲ್ಲಿ ಬೆಳೆ ವಿಮೆಗೆ ಒಳಪಟ್ಟ ಎಲ್ಲಾ ರೈತರಿಗೂ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು. ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ, ಬೆಳೆವಿಮೆ ಮಾಡಿಸಿರುವ ರೈತರು ಈ ಬಗ್ಗೆ ಸಂಬಂಧಪಟ್ಟ ಹಣಕಾಸು ಸಂಸ್ಥೆ ಅಥವಾ ಅನುಷ್ಠಾನ ಗೊಳಿಸುವ ವಿಮಾ ಸಂಸ್ಥೆಗಳ ಕಚೇರಿಗಳಿಗೆ ತಕ್ಷಣ ಸೂಚನೆ ನೀಡಬೇಕು ಮತ್ತು ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 48 ಗಂಟೆಗಳ ಒಳಗಾಗಿ ತಿಳಿಸಬೇಕು.
ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ ನಿಯೋಜಿಸಬೇಕು. ಜಿಲ್ಲಾ ಕಂದಾಯ ಇಲಾಖೆ ಹಾಗೂ ಕೃಷಿ ತೋಟಗಾರಿಕಾ ಇಲಾಖೆಯ ಆಡಳಿತವು ಬೆಳೆ ನಷ್ಟದ ಪ್ರಮಾಣವನ್ನು ನಿರ್ಧರಿಸುವಲ್ಲಿ ವಿಮಾ ಸಂಸ್ಥೆಯವರಿಗೆ ನೆರವು ನೀಡತಕ್ಕದ್ದು.

ವಾಣಿಜ್ಯ ವಿಮಾ ಕಂತಿನ ದರ ಹಾಗೂ ರೈತರು ಕಟ್ಟಬೇಕಾಗಿರುವ ವಿಮಾ ಕಂತಿನ ದರದಲ್ಲಿನ ವ್ಯತ್ಯಾಸದ ಮೊತ್ತ ಶೇಕಡ 50 ರಷ್ಟು ಹಣವನ್ನು ರಾಜ್ಯ ಸರ್ಕಾರವು ಬರಿಸಲು ಹಾಗೂ ಈ ಹಣವನ್ನು ಅನುಷ್ಠಾನಗೊಳಿಸುವ ವಿವಿಧ ವಿಮಾ ಸಂಸ್ಥೆಗಳಿಗೆ ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಯ ಮೂಲಕ ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಗ್ರಾಮ ಪಂಚಾಯಿತಿ ಮತ್ತು ಹೋಬಳಿಗಳ ಪಟ್ಟಿಯಲ್ಲಿ ನೀಡಲಾಗಿರುವ ಬೆಳೆಗಳಿಗೆ ಬೆಳೆ ಸಾಲ ಪಡೆದ ರೈತರಿಗೆ ಜುಲೈ ತಿಂಗಳ ಒಳಗೆ ಬೆಳೆ ಸಾಲ ಮಂಜೂರುರಾಗಿದ್ದರೆ ಅಂತಹ ರೈತರನ್ನು ಕಡ್ಡಾಯವಾಗಿ ಯೋಜನೆ ಅಡಿಯಲ್ಲಿ ಒಳಪಡಿಸತಕ್ಕದ್ದು. ಬೆಳೆ ಸಾಲದ ಮೊತ್ತಕ್ಕೆ ರೈತರ ವಿಮಾ ಕಂತನ್ನು ಹೆಚ್ಚುವರಿಯಾಗಿ ಮಂಜೂರು ಮಾಡತಕ್ಕದ್ದು.

ಗ್ರಾಮ ಪಂಚಾಯಿತಿ ಮತ್ತು ಹೋಬಳಿಗಳ ಪಟ್ಟಿಯಲ್ಲಿ ನೀಡಲಾಗಿರುವ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ ರೈತರು ಯೋಜನೆಯಡಿ ಭಾಗವಹಿಸಲು ಜುಲೈ ತಿಂಗಳ ಒಳಗೆ ಆಗಿರುತ್ತದೆ. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ, ಖಾತೆ, ಪಾಸ್ ಪುಸ್ತಕ, ಕಂದಾಯ ರಸೀದಿಯನ್ನು ನೀಡತಕ್ಕದ್ದು.

ಬೆಳೆ ಸಾಲ ಪಡೆಯದ ರೈತರು ಅಂದಾಜು ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲಿ ಪಾಲ್ಗೊಳ್ಳಬಹುದು. ಬೆಳೆ ವಿಮೆಗೆ ನೋಂದಾಯಿಸಿದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದಲ್ಲಿ ಯೋಜನೆಯಲ್ಲಿ ಭಾಗವಹಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕಿಂತ 30 ದಿವಸಗಳ ಮುಂಚಿತವಾಗಿ ನೋಂದಾಯಿಸಿದ ಆರ್ಥಿಕ

International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣ ಪತ್ರ ನೀಡಿ ವಿಮೆ ಮಾಡಿಸಿದ ಬೆಳೆಯನ್ನು ಬದಲಾಯಿಸತಕ್ಕದ್ದು. ಅಂತಹ ಸಂದರ್ಭದಲ್ಲಿ ಹೆಚ್ಚುವರಿ ವಿಮಾಕಂತಿನ ವ್ಯತ್ಯಾಸದ ಮೊತ್ತವನ್ನು ರೈತರು ಬರಿಸತಕ್ಕದ್ದು ಅಥವಾ ಹೆಚ್ಚುವರಿ ವಿಮಾ ಕಂತನ್ನು ರೈತರಿಗೆ ಮರುಪಾವತಿಸುವುದು. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಬ್ಯಾಂಕುಗಳಿಗೆ ವರ್ಗಾಯಿಸಿದ ಒಂದು ವಾರದೊಳಗೆ ರೈತರ ಖಾತೆಗೆ ಜಮಾ ಮಾಡತಕ್ಕದ್ದು. ರೈತರ ಖಾತೆಗೆ ಜಮ ಮಾಡಿದ ವಿವರಗಳನ್ನು ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಿ ಸದರಿ ವಿವರಗಳನ್ನು ವಿಮಾ ಸಂಸ್ಥೆಗೆ ನೀಡತಕ್ಕದ್ದು. ವಿಮಾ ಸಂಸ್ಥೆಗಳು ಬೆಳೆ ಸಾಲ ಪಡೆಯದ ರೈತರನ್ನು ಅಧಿಕೃತ ಏಜೆಂಟರ ಮೂಲಕವೂ ಸಹಯೋಜನೆಯಡಿ ಒಳಪಡಿಸಲು ಅನುಮತಿ ನೀಡಲಾಗಿದೆ.

2016ರ ಮುಂಗಾರು ಹಂಗಾಮಿನಲ್ಲಿ ಅಧಿಸೂಚಿತ ಘಟಕದಲ್ಲಿ ಶೇಕಡ 75 ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ ಗರಿಷ್ಠ ಶೇಕಡ 25ರಷ್ಟು ಬೆಳೆ ವಿಮಾ ನಷ್ಟ ಪರಿಹಾರವನ್ನು ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಇತ್ಯರ್ಥಪಡಿಸಿ ಮುಂದಿನ ಅವಧಿಗೆ ವಿಮೆಯನ್ನು ರದ್ದುಪಡಿಸತಕ್ಕದ್ದು. ಈ ಸಂಬಂಧ ಕ್ಷೇತ್ರದ ವರದಿಯನ್ನು ಘೋಷಿಸಲು ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಹಾಗೂ ಮಳೆ ಮತ್ತು ಇತರೆ ಕೃಷಿ ಹವಾಮಾನದ ವರದಿಯನ್ನು ನೀಡಲು ನಿರ್ದೇಶಕರು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು ಇವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ನೋಡಲ್ ಅಧಿಕಾರಿಗಳಿಂದ ವರದಿ ಬಂದ ನಂತರ ಒಂದು ತಿಂಗಳೊಳಗೆ ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಮೇಲಿನಂತೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು.

2016ರ ಮುಂಗಾರು ಹಂಗಾಮಿನಲ್ಲಿ ಅಧಿಸೂಚಿತ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು ಸಾಮಾನ್ಯ ಇಳುವರಿಗಿಂತ ಶೇಕಡ 50 ಕ್ಕಿಂತ ಹೆಚ್ಚಿನ ಬೆಳೆ ನಷ್ಟ ಸಂಭವಿಸಿದಲ್ಲಿ ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡ 25ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡತಕ್ಕದ್ದು. ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಬೆಳೆ ಇಳುವರಿ ಮಾಹಿತಿ ಬಂದ ನಂತರ ಅಂತಿಮ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಈ ಹಣವನ್ನು ಹೊಂದಾಣಿಕೆ ಮಾಡತಕ್ಕದ್ದು. ಈ ಬಗ್ಗೆ ವರದಿಯನ್ನು ನೀಡಲು ಜಿಲ್ಲಾ ಜಿಲ್ಲಾಧಿಕಾರಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಈ ಯೋಜನೆಯಲ್ಲಿ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೇ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವೈಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ರಾಜ್ಯದ ಎಲ್ಲ ಜಿಲ್ಲೆಗಳನ್ನು ಒಳಪಡಿಸಲಾಗಿದೆ.

ಬೆಳೆ ನಷ್ಟವನ್ನು ಜಿಲ್ಲಾಮಟ್ಟದಲ್ಲಿ ಕೃಷಿ ಕಂದಾಯ, ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳು ಸಂಬಂಧಿಸಿದ ವಿಮಾ ಸಂಸ್ಥೆಯ ಅಧಿಕಾರಿಗಳು, ಲೀಡ್ ಬ್ಯಾಂಕ್ ಅಧಿಕಾರಿಗಳನ್ನೊಳಗೊಂಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿಯು, ಅಂದಾಜಿಸಿ, ತೀರ್ಮಾನಿಸಿದಂತೆ ವಿಮೆ ಮಾಡಿಸಿದ ರೈತರಿಂದ ಅರ್ಜಿ ಬಂದ ನಂತರ ಒಂದು ತಿಂಗಳೊಳಗೆ ವಿಮಾ ಸಂಸ್ಥೆಗಳು ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು. ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ರಾಜ್ಯ ಸರ್ಕಾರವು ನಡೆಸುವ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಕಂಡುಹಿಡಿಯಲಾಗಿದೆ. ಇಳುವರಿ ಮಾಹಿತಿಯನ್ನು ಮಾತ್ರ ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಿ ಇತ್ಯರ್ಥಪಡಿಸತಕ್ಕದ್ದು. ಇತರೆ ಇಳುವರಿ ಅಂದಾಜು ಮಾಡುವಂತಹ ವಿಧಾನಗಳಾದ ಅಣೆವಾರಿ(ಸಮೀಕ್ಷೆ) ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇಲಾಖೆ ಅಥವಾ ಸಂಸ್ಥೆ ಕ್ಷಾಮ, ಬರ, ಪ್ರವಾಹ ಎಂದು ಘೋಷಿಸಿ ಇಳುವರಿ ನಷ್ಟವನ್ನು ಅಂದಾಜು ಮಾಡುವ ಮಾಹಿತಿಯನ್ನು ಈ ಯೋಜನೆಯಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಲು ಪರಿಗಣಿಸತಕ್ಕದ್ದಲ್ಲ.

ತಾಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧಿಸೂಚಿಸಬೇಕಾದರೆ, ಆ ಬೆಳೆಯ ವಿಸ್ತೀರ್ಣ ಕನಿಷ್ಟ 75 ಹೆಕ್ಟೇರ್ ಇರಬೇಕು. 75 ಹೆಕ್ಟೇರಿಗಿಂತ ಕಡಿಮೆ ಇರುವ ಗ್ರಾಮ ಪಂಚಾಯಿತಿಗಳ ರೈತರಿಗೆ ಈ ಯೋಜನೆಯ ಸೌಲಭ್ಯವನ್ನು ದೊರಕಿಸಿಕೊಡುವ ಉದ್ದೇಶದಿಂದ ಎರಡು ಅಥವಾ ಮೂರು ಗ್ರಾಮ ಪಂಚಾಯಿತಿಗಳನ್ನು ಒಗ್ಗೂಡಿಸಿ ಅತಿ ಹೆಚ್ಚು ವಿಸ್ತೀರ್ಣ ಹೊಂದಿರುವ ಒಂದು ಗ್ರಾಮ ಪಂಚಾಯತಿಯನ್ನು ವಿಮಾ ಘಟಕ ಎಂದು ಪರಿಗಣಿಸಿ ಅಧಿಸೂಚಿಸಲಾಗುತ್ತಿದ್ದು 75 ಹೆಕ್ಟೇರ್ ಗಿಂತ ಕಡಿಮೆ ವಿಸ್ತೀರ್ಣ ಇರುವ ಗ್ರಾಮ ಪಂಚಾಯಿತಿಗಳಲ್ಲಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯಾರ್ಥ ಪಡಿಸುವ ಸಂದರ್ಭದಲ್ಲಿ ಅಧಿಸೂಚಿತ ವಿಮಾ ಘಟಕದ ಇಳುವರಿ ಮಾಹಿತಿಯನ್ನು ಪರಿಗಣಿಸತಕ್ಕದ್ದು.

ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಯೋಜನೆಯನ್ನು ಅನುಷ್ಠಾನಗೊಳಿಸಲು ವಿಮಾ ಸಂಸ್ಥೆಗಳು ಕೈಗೊಳ್ಳುವ ಪ್ರಚಾರ ಪ್ರಕಟಣೆ ಮತ್ತು ತರಬೇತಿ ನೀಡುವಲ್ಲಿ ಸಹಕಾರ ನೀಡಬೇಕು. ಕೃಷಿ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳು 2016 ರ ಹಂಗಾಮಿನಲ್ಲಿ ಆಧಿಸೂಚಿಸಿರುವ ಬೆಳೆಗಳು ಮತ್ತು ಘಟಕಗಳ ಬಗ್ಗೆ ಬ್ಯಾಂಕುಗಳ ರೈತ ಸಂಪರ್ಕ ಕೇಂದ್ರಗಳ ಮತ್ತು ಗ್ರಾಮ ಪಂಚಾಯಿತಿ ಕಚೇರಿಗಳ ಸೂಚನಾ ಫಲಕಗಳ ಮೇಲೆ ಪ್ರಕಟಿಸಿ ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಿದೆ.

## 6. ಈ ಸಂಶೋಧನಾ ಲೇಖನದ ಉದ್ದೇಶ:-

ಸಂಶೋಧನ ಲೇಖನವನ್ನು ಮುಂದಿನ ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ವಿಶ್ಲೇಷಿಸಲಾಗಿದೆ. ಅವುಗಳೆಂದರೆ,

- ವಿವಿಧ ವರ್ಷಗಳಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಫಲಾನುಭವಿಗಳ ಪರಿಶೀಲನೆ ಮಾಡುವುದು
- ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಲಹೆಗಳನ್ನು ನೀಡುವುದು.

### 7. ಸಂಶೋಧನ ಲೇಖನದ ಅಧ್ಯಯನ ವಿಧಾನ.

ಈ ಸಂಶೋಧನ ಲೇಖನವನ್ನು ದ್ವಿತೀಯ ಅಥವಾ ಮಾಧ್ಯಮಿಕ ಆಕಾರಗಳ ಮೇಲೆ ಕೈಗೊಳ್ಳಲಾಗಿದೆ. ಅಧ್ಯಯನಕ್ಕೆ ಬೇಕಾಗುವ ಮಾಹಿತಿಯನ್ನು ಕರ್ನಾಟಕ ಆರ್ಥಿಕ ಸಮೀಕ್ಷೆ 2020–21 ಹಾಗೂ ಕೃಷಿ ಇಲಾಖೆ ಮಾಹಿತಿ, ಪ್ರಾದೇಶಿಕವಾಗಿ ಪ್ರಕಟವಾಗುವ ಜನಪದ ಮಾಸ ಪತ್ರಿಕೆಯ ಅಂಕಣಗಳು, ಕರ್ನಾಟಕ ವಿಕಾಸದಲ್ಲಿ ಬರುವ ವರದಿಗಳು, ದಿನ ಪತ್ರಿಕೆಗಳು, ಕೃಷಿರಂಗದ ಮಾಹಿತಿಗಳು, ಕೃಷಿ ಕೈಪಿಡಿಯ ಸಮೀಕ್ಷೆ ವಿಷಯಗಳು ಹಾಗೂ ಮಾಸ ಪತ್ರಿಕೆ ಮುಂತಾದ ದ್ವಿತೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

### 8. ಲೇಖನದ ಚರ್ಚೆ ಮತ್ತು ಫಲಿತಾಂಶಗಳು.

ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯು ರೈತರನ್ನು ವಿವಿಧ ಬಗೆಯ ತೊಂದರೆಗಳಿಂದ ರಕ್ಷಿಸಲು ಮತ್ತು ಅವರ ಆದಾಯದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲು ಕೇಂದ್ರ ಸರ್ಕಾರವು ಅನುಷ್ಠಾನಗೊಳಿಸಿದೆ. ಈ ಯೋಜನೆಯನ್ನು ರೈತರಿಗೆ ತಲುಪಿಸುವ ಕಾರ್ಯವನ್ನು ರಾಜ್ಯ ಸರ್ಕಾರಗಳು ಮಾಡುತ್ತಿವೆ. ಅದರಂತೆ, ನಮ್ಮ ರಾಜ್ಯವು ಈ ಯೋಜನೆಯನ್ನು ಕೆಲವು ಬದಲಾವಣೆಗಳೊಂದಿಗೆ ಜಾರಿಗೊಳಿಸಿದೆ. ಆದ್ದರಿಂದ ಈ ಲೇಖನದಲ್ಲಿ ನಮ್ಮ ರಾಜ್ಯದಲ್ಲಿ ಆಗಿರುವ ಪ್ರಗತಿಯನ್ನು ನಿರ್ದಿಷ್ಟ ಉದ್ದೇಶಗಳೊಂದಿಗೆ ಕೆಳಗಿನಂತೆ ಚರ್ಚಿಸಲಾಗಿದೆ.

### 8.1. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಫಲಾನುಭವಿಗಳ ಪರಿಶೀಲನೆ

ರೈತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವುದರೊಂದಿಗೆ ಅವರ ಆದಾಯವನ್ನು ದ್ವಿಗುಣಗೊಳಿಸುವುದು ಪ್ರಸ್ತುತ ಸರ್ಕಾರದ ಒಂದು ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗೆ ಪ್ರಧಾನ ಮಂತ್ರಿ ಫಸಲ್ ಬೀಮಾ ಯೊಜನೆಯು ಅತ್ಯಂತ ಸೂಕ್ತವಾದ ತಂತ್ರವಾಗಿದೆ. ಕರ್ನಾಟಕ ರಾಜ್ಯದಲ್ಲಿ ರೈತರು ಪ್ರಧಾನ ಮಂತ್ರಿ ಫಸಲ್ ಬೀಮಾ ಯೊಜನೆ ಪಡೆದುಕೊಂಡಿರುವುದಕ್ಕೆ ಸಂಬಂಧಿಸಿದಂತೆ ದತ್ತಾಂಶಗಳನ್ನು ಸಂಗ್ರಹಿಸಿ ಅವುಗಳನ್ನು ಕೋಷ್ಟಕ 1ರಲ್ಲಿ ಪ್ರಸ್ತುತಪಡಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದ್ದು ಅದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಪ್ರಸ್ತುತ ಪಡಿಸಲಾಗಿದೆ. 2016–17 ಸಾಲಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಪಾಲ್ಗೊಂಡ ರೈತರ ಸಂಖ್ಯೆ 2123247 ಲಕ್ಷ ರೈತರಾಗಿದ್ದು ಇವರುಗಳಿಂದ ಅಂದರೆ, ರೈತರಿಂದ ಸಂಗ್ರಹಿಸಿದ ವಿಮಾ ಕಂತು ರೂ 21584.43 (ಲಕ್ಷಗಳಲ್ಲಿ) ಹಣವನ್ನು ವಿಮಾ ಕಂತಾಗಿ ಸ್ವೀಕರಿಸಲಾಗಿದೆ ಹಾಗೂ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಫಲಾನುಭವಿ ರೈತರ ಸಂಖ್ಯೆ 1798012 ಆಗಿರುತ್ತದೆ. ಇದರಲ್ಲಿ ಉಳಿದ 325235 ರೈತರು ಪರಿಹಾರದ ಫಲಾನುಭವಿಗಳಾಗಿ ಸೇರಿರುವುದಿಲ್ಲ. ಏಕೆಂದರೆ 325235 ಲಕ್ಷ ರೈತರಿಗೆ ಯಾವುದೇ ಬೆಳೆ ಹಾನಿ ಸಂಭವಿಸಿರುವುದಿಲ್ಲ, ಎಂಬುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದನ್ನು ವಿಶ್ಲೇಷಿಸಿದಾಗ ಶೇಕಡ 84.7 ರೈತರು ಈ ವಿಮಾ ಯೋಜನೆಯ ಅನುಕೂಲತೆಯನ್ನು ಪಡೆದುಕೊಂಡಿರುತ್ತಾರೆ. ಇನ್ನುಳಿದ ಶೇಕಡ 15.3 ರೈತರ ಕೃಷಿ ಬೆಳೆಗಳಿಗೆ ಯಾವುದೇ ರೀತಿಯ ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿರುವುದಿಲ್ಲ ಎಂಬುವುದು ಕೆಳಕಂಡ ಅಂಕಿಅಂಶಗಳಿಂದ ತಿಳಿದುಬರುತ್ತದೆ. ಈ ಒಂದು 2016–17 ನೇ ಸಾಲಿನಲ್ಲಿ ಬಹುತೇಕವಾಗಿ ಅಂದರೆ ಶೇಕಡ 84.7 ರಷ್ಟು ಕೃಷಿ ಬೆಳೆ ಪ್ರಾಕೃತಿಕ ವಿಕೋಪಗಳಿಗೆ ತುತ್ತು ಆಗಿರುವುದಲ್ಲದೆ, ಸರ್ಕಾರಕ್ಕೂ ಆರ್ಥಿಕ ಹೊರೆಯಾಗಿ ಮತ್ತು ರೈತರ ಆದಾಯವು ಕೂಡ ಹೆಚ್ಚಳವಾಗದೆ ಇರುವ ಸನ್ನಿವೇಶವನ್ನು ಮೇಲ್ಕಂಡ ಅಂಕಿ–ಅಂಶಗಳಿಂದ ತಿಳಿದುಬರುತ್ತದೆ. 2017–18 ನೇ ಸಾಲಿನಲ್ಲಿ ಈ ಯೋಜನೆಗೆ ಪಾಲ್ಗೊಂಡ ರೈತರ ಸಂಖ್ಯೆ 1356074 ಹಾಗೂ ಈ ರೈತರುಗಳಿಂದ ಸಂಗ್ರಹಿಸಿದ ವಿಮಾ ಕಂತಿನ ರೂ 2053422 ಆಗಿರುತ್ತದೆ ಹಾಗೂ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಫಲಾನುಭವಿ ರೈತರ ಸಂಖ್ಯೆ 2550336 ಅಂದರೆ ಶೇಕಡ 40.6 ಆಗಿರುತ್ತದೆ. ಇದರಲ್ಲಿ ಉಳಿದ 805738 ರೈತರು ಪರಿಹಾರದ ಫಲಾನುಭವಿಗಳಾಗಿ ಸೇರಿರುವುದಿಲ್ಲ. ಏಕೆಂದರೆ 805738 ಲಕ್ಷ ರೈತರಿಗೆ ಯಾವುದೇ ಬೆಳೆ ಹಾನಿ ಸಂಭವಿಸಿರುವುದಿಲ್ಲ ಎಂಬುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಕಳೆದ 16–17ನೇ ಸಾಲಿಗೆ ಹೋಲಿಸಿದಾಗ 17–18ನೇ ಸಾಲಿನಲ್ಲಿ ಫಲಾನುಭವಿ ರೈತರ ಸಂಖ್ಯೆ ಅನುಕ್ರಮವಾಗಿ ಶೇಕಡ 84.7 ರಿಂದ ಶೇಕಡ 40.6 ಕ್ಕೆ ಅರ್ಧದಷ್ಟು ಫಲಾನುಭವಿ ರೈತರ ಸಂಖ್ಯೆ ಕಡಿಮೆಯಾಗಿರುವುದು ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಏನೆಂದರೆ ಆ ನಿರ್ದಿಷ್ಟ ವರ್ಷದಲ್ಲಿ ಅತಿವೃಷ್ಟಿ–ಅನಾವೃಷ್ಟಿ ಮುಂತಾದ ಪ್ರಾಕೃತಿಕ ವಿಕೋಪಗಳು ಸಂಭವಿಸದೇ ಇರುವುದರಿಂದ ರೈತರಿಗೆ ಬೆಳೆವಿಮೆಯನ್ನು ಪಡೆದುಕೊಳ್ಳುವಂತ ಅನಿವಾರ್ಯತೆ ಸೃಷ್ಟಿಯಾಗಿಲ್ಲ ಎಂಬುವುದು ಈ ಕೆಳಕಂಡ ಅಂಶಗಳಿಂದ ನಮಗೆ ತಿಳಿದುಬರುತ್ತದೆ. 2018–19 ನೇ ಸಾಲಿನಲ್ಲಿ ಈ ಯೋಜನೆಯಲ್ಲಿ ಪಾಲ್ಗೊಂಡ ರೈತರ ಸಂಖ್ಯೆ 1784950 ಹಾಗೂ ರೈತರುಗಳಿಂದ ಸಂಗ್ರಹಿಸಿದ ವಿಮಾ ಕಂತಿನ ರೂ 18885.08 (ಲಕ್ಷಗಳಲ್ಲಿ) ಆಗಿರುತ್ತದೆ ಹಾಗೂ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಫಲಾನುಭವಿ ರೈತರ ಸಂಖ್ಯೆ 1259668 ಆಗಿರುತ್ತದೆ. ಇದರಲ್ಲಿ ಇನ್ನು ಉಳಿದ ರೈತರ ಸಂಖ್ಯೆ 525282 ಅಂದರೆ ಶೇಕಡ 70.6 ಆಗಿರುತ್ತದೆ. ಇದರಲ್ಲಿ 525282 ರೈತರು ಪರಿಹಾರದ

ಫಲಾನುನುಭವಿಗಳಾಗಿ ಸೇರಿರುವುದಿಲ್ಲ. ಏಕೆಂದರೆ 528282 ಲಕ್ಷ ರೈತರಿಗೆ ಯಾವುದೇ ಬೆಳೆ ಹಾನಿ ಸಂಭವಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಿಂದಿನ 2017–18ನೇ ಸಾಲಿಗೆ ಹೋಲಿಸಿದಾಗ 2018–19 ನೇ ಸಾಲಿನಲ್ಲಿ ರೈತ ಫಲಾನುಭವಿಗಳ ಸಂಖ್ಯೆ ಶೇಕಡಾ 70.6 ರಷ್ಟು ಇರುವುದು ಕಂಡುಬರುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಪ್ರಸ್ತುತ 2018–19ರ ಫಲಾನುಭವಿ ರೈತರ ಸಂಖ್ಯೆ ಶೇಕಡ 29.4 ರಷ್ಟು ಕಡಿಮೆ ಆಗಿರುವುದು ಕಂಡುಬರುತ್ತದೆ. ಈ ಸಮಯದಲ್ಲಿ ಯಾವುದೇ ಬೆಳೆಹಾನಿ ಸಂಭವಿಸಿರುವುದಿಲ್ಲ ಎಂದು ತಿಳಿದು ಬರುತ್ತದೆ.

ಹಿಂದಿನ 2017–18 ವರ್ಷಕ್ಕೆ ಹೋಲಿಸಿದಂತೆ ಪ್ರಸ್ತುತ ವರ್ಷದಲ್ಲಿ ಫಲಾನುಭವಿ ರೈತರ ಸಂಖ್ಯೆ ಶೇಕಡಾ 29.4 ರಷ್ಟು ಹೆಚ್ಚಳವಾಗಿರುತ್ತದೆ. ಮಳೆ ಕೊರತೆ, ಕೀಟ ಬಾದೆಗಳು ಹಾಗೂ ಕೆಲವು ಕೃಷಿ ಪ್ರದೇಶಗಳಲ್ಲಿ ವನ್ಯಮೃಗಗಳ ಹಾವಳಿಯಿಂದಾಗಿ ಕೃಷಿ ಬೆಳೆ ಹಾನಿಯಾಗಿ ಫಲಾನುಭವಿ ರೈತರ ಸಂಖ್ಯೆ ಸಹ ಹೆಚ್ಚಳವಾಗಿರುವುದಕ್ಕೆ ಕಾರಣಗಳನ್ನು ನೋಡಬಹುದಾಗಿದೆ. 2019–20 ನೇ ಸಾಲಿನಲ್ಲಿ ಈ ಯೋಜನೆಗೆ ಪಾಲ್ಗೊಂಡ ರೈತರ ಸಂಖ್ಯೆ 2020875 ಮತ್ತು ರೈತರಿಂದ ಸಂಗ್ರಹಿಸಿದ ವಿಮಾ ಕಂತಿನ ರೂ 17355.90 ಆಗಿರುತ್ತದೆ. ಹಾಗೂ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಫಲಾನುಭವಿ ರೈತರ ಸಂಖ್ಯೆ 369484 ಅಂದರೆ ಶೇಕಡ 70.6 ಆಗಿರುತ್ತದೆ. ಇದರಲ್ಲಿ ಇನ್ನುಳಿದ ರೈತರು ಅಂದರೆ 1651391 ರೈತರು ಪರಿಹಾರದ ಯೋಜನೆಯ ಫಲಾನುಭವಿಗಳಾಗಿ ಸೇರಿರುವುದಿಲ್ಲ. ಏಕೆಂದರೆ 1651391 ಲಕ್ಷ ರೈತರಿಗೆ ಯಾವುದೇ ಬೆಳೆ ಹಾನಿ ಸಂಭವಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಿಂದಿನ 2018–19 ನೇ ಸಾಲಿಗೆಹೋಲಿಸಿದಾಗ 2019–20 ನೇ ಸಾಲಿನಲ್ಲಿ ಫಲಾನುಭವಿ ರೈತರ ಸಂಖ್ಯೆ ಶೇಕಡ 18.3 ರಷ್ಟು ಇರುವುದು ಕಂಡು ಬರುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಪ್ರಸ್ತುತ 2019–20ರಲ್ಲಿ ಫಲಾನುಭವಿ ರೈತರ ಸಂಖ್ಯೆ ಶೇಕಡ 82 ರಷ್ಟು ಕಡಿಮೆಯಾಗಿರುವುದು ಕಂಡುಬರುತ್ತದೆ, ಅಂದರೆ ಈ ಸಮಯದಲ್ಲಿ ಯಾವುದೇ ಬೆಳೆ ಹಾನಿ ಆಗಿರುವುದಿಲ್ಲ.

**ಕೋಷ್ಟಕ–1: ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಪ್ರಗತಿ ವಿವರ**

| ಕ್ರಮ ಸಂಖ್ಯೆ | ವರ್ಷ | ಪಾಲ್ಗೊಂಡ ರೈತರ ಸಂಖ್ಯೆ | ರೈತರಿಂದ ಸಂಗ್ರಹಿಸಿದ ವಿಮಾಕಂತು(ಲಕ್ಷ ರೂ) | ಫಲಾನುಭವಿ ರೈತರ ಸಂಖ್ಯೆ | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ) | ಪ್ರಯೋಜನ ಪಡೆದುಕೊಳ್ಳದ ರೈತರ ಸಂಖ್ಯೆ |
|---|---|---|---|---|---|---|
| 1 | 2016–17 | 2123247 | 21584.43 | 1798012 (84.7) | 181968 | 325235 |
| 2 | 2017–18 | 1356074 | 2053422 | 550336 (40.6) | 60443 | 805738 |
| 3 | 2018–19 | 1784950 | 18885.08 | 1259668 (70.6) | 256301 | 525282 |
| 4 | 2019–20 | 2020875 | 17355.90 | 369484 | 33383.19 | 1651391 |

| | | | | | | |
|---|---|---|---|---|---|---|
| | | | | (18.3) | | |

**ಮೂಲ:– ಕರ್ನಾಟಕ ಆರ್ಥಿಕ ಸಮೀಕ್ಷೆ 2020–21.**

**ಟಿಪ್ಪಣಿ:– ಆವರಣದಲ್ಲಿರುವ ದತ್ತಾಂಶ ಒಟ್ಟು ರೈತರ ಶೇಕಡವಾರು ಆಗಿರುತ್ತದೆ.**

**9. ಸಲಹೆಗಳು ಮತ್ತು ಪರಿಹಾರ ಕ್ರಮಗಳು.**

ಕರ್ನಾಟಕದಲ್ಲಿ ಸುಮಾರು 80 ಲಕ್ಷ ರೈತರು ಕೃಷಿಯಲ್ಲಿ ತೊಡಗಿಕೊಂಡಿದ್ದು, ಇದರಲ್ಲಿ ಪ್ರಧಾನಮಂತ್ರಿ ಪಸಲ್ ಬಿಮಾ ಯೋಜನೆಯಲ್ಲಿ ಪಾಲ್ಗೊಂಡ ರೈತರ ಸಂಖ್ಯೆ ಕೇವಲ 20.20 ಲಕ್ಷ ರೈತರು ಮಾತ್ರ ಹಾಗೂ ಈ ಯೋಜನೆಯು ಎಲ್ಲ ರೈತರಿಗೂ ಸಂಪೂರ್ಣವಾಗಿ ತಲುಪಿರುವುದಿಲ್ಲ ಆದ್ದರಿಂದ ಉಳಿದ ರೈತರಿಗೂ ಕೂಡ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಯೋಜನೆಯನ್ನು ಇನ್ನೂ ವಿಸ್ತಾರಗೋಳಿಸುವುದರ ಮೂಲಕ ಎಲ್ಲ ರೈತರು ಪ್ರಯೋಜನವನ್ನು ಪಡೆದುಕೊಳ್ಳಲು ಪ್ರೋತ್ಸಾಹಿಸಬೇಕು.

ಐದು ವರ್ಷದ ಹಿಂದೆ ಭಾರಿ ನಿರೀಕ್ಷೆಯೊಂದಿಗೆ ಜಾರಿಗೆಬಂದ ಈ ಯೋಜನೆ ಬಗ್ಗೆ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ನಿರಾಸಕ್ತಿ ಹೆಚ್ಚುತ್ತಿದೆ. 2016–17 ರಲ್ಲಿ ಈ ಯೋಜನೆ ಆರಂಭವಾದಾಗ ಸುಮಾರು 21.23 ಲಕ್ಷ ರೈತರು ಅರ್ಜಿ ಹಾಕಿದ್ದರು. 2019–20 ರಲ್ಲಿ 20.20 ಲಕ್ಷಕ್ಕೆ ಇಳಿದಿದೆ. ಹಾಗಾಗಿ ಯೋಜನೆಯನ್ನು ಯಶಸ್ವಿಗೊಳಿಸಲು ಈಗ ನೀಡುತ್ತಿರುವ ಹೆಕ್ಟೇರುವಾರು ನಷ್ಟ ಪರಿಹಾರವನ್ನು ದ್ವಿಗುಣಗೊಳಿಸಬೇಕು. ಯೋಜನೆಯಲ್ಲಿ ಅನುಸರಿಸುವ ಮಾನದಂಡಗಳನ್ನು ಸರಳಗೊಳಿಸುವುದರ ಮೂಲಕ ಎಲ್ಲ ರೀತಿಯ ರೈತರು ಪಲ್ಗೊಳ್ಳಲು ಅವಕಾಶ ನೀಡಬೇಕು.

ನಾನಾ ಕಾರಣಗಳನ್ನ ನೀಡಿ ಕ್ಲೆಮುಗಳನ್ನು ತಿರಸ್ಕರಿಸುತ್ತಿರುವುದು, ಪರಿಹಾರ ಬಾಕಿ ಮತ್ತು ಹೆಚ್ಚಿನ ರೈತರಿಗೆ ಪಾವತಿಸಿದ ಮೊತ್ತಕ್ಕಿಂತಲೂ ಕಡಿಮೆ ಹಣ ಪರಿಹಾರವಾಗಿ ದೊರೆತಿರುವುದು, ಸೇರಿದಂತೆ ಹಲವು ಕಾರಣಗಳಿಂದ ರೈತರು ಈ ವಿಮೆ ಯೋಜೆನೆಯ ಬಗ್ಗೆ ಆಸಕ್ತಿ ಕಳೆದುಕೊಳ್ಳುವಂತಾಗಿದೆ. ಆದ್ದರಿಂದ ಸೂಕ್ತ ಕ್ರಮಗಳನ್ನು ಕೈಗೊಂಡು ರೈತರಿಗೆ ಸಕಾಲದಲ್ಲಿ ಪರಿಹಾರದ ಹಣವನ್ನು ತಲುಪಿಸುವಂತಾಗಬೇಕು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಮತ್ತು ಸೌಲಭ್ಯಗಳು ರೈತರಿಗೆ ತಲುಪಬೇಕಿದ್ದು ಈ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕೃಷಿ ಇಲಾಖೆಯಿಂದ ಈ ಯೋಜನೆಯ ಬಗ್ಗೆ ಹೆಚ್ಚು ಕಾರ್ಯಾಕ್ರಮಗಳು ನಡೆಯುವಂತಾಗಬೇಕು. ಶಾಲಾ ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಕೃಷಿಯ ಬಗ್ಗೆ ಹಾಗೂ ಈ ಯೋಜನೆಯ ಬಗ್ಗೆ ಅರಿವು ಕಾರ್ಯಾಗಾರ ವಿಶೇಷ ತರಗತಿ ನಡೆಸುವಂತಾಗಬೇಕು.

2016 ರಿಂದ 2020 ತನಕ ಈ ಯೋಜನೆಯ ಅಂಕಿ ಅಂಶಗನ್ನು ಗಮನಿಸಿದಾಗ ಮೇಲ್ನೋಟಕ್ಕೆ ನಿಖರತೆ ಇಲ್ಲದೇ ಇರುವುದು ಕಂಡುಬರುತ್ತದೆ. ನಿಖರ ದತ್ತಾಂಶಗಳನ್ನು ಸಂಗ್ರಹಿಸಿ ಅವುಗಳನ್ನು ವರ್ಗೀಕರಣಗೊಳಿಸಬೇಕು. ಸರ್ಕಾರದಿಂದ ರೈತಪರ ಯೋಜನೆಗಳು ಕಟ್ಟಕಡೆಯ ಅಂದರೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೂ ದೊರೆಯುವಂತಾದಾಗ ಮಾತ್ರ ಈ ಫಸಲ್ ಬಿಮಾ ಯೋಜನೆ ರೈತರಿಗೆ ಫಲ ನೀಡುವಲ್ಲಿ ಯಾವುದೇ ಅನುಮಾನವಿಲ್ಲ.

**ಸಾರಾಂಶ.**

ರಾಷ್ಟ್ರೀಯ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ರೈತರಿಗೆ ಅಪ್ತಮಿತ್ರನಾಗಿ ಹಾಗು ಆಪತ್ಬಾಂದವನಾಗಿ ಪರಿಣಮಿಸಿದೆ. ಯಾವುದೇ ರಾಷ್ಟವು ತನ್ನ ರೈತರನ್ನು ಕಡೆಗಣಿಸಿ ಅಭಿವೃದ್ಧಿ ಹೊಂದಲಾರದೆಂದು ಹೇಳಲಾಗುತ್ತದೆ. ಈ ರೀತಿಯ ಹೆಜ್ಜೆಯಿಂದ ಸರ್ಕಾರವು ದೇಶದ ಅನ್ನದಾತರಾದ ರೈತರಿಗೆ ಎಲ್ಲ ಸ್ತರಗಳಲ್ಲೂ ರಕ್ಷಣೆ ಬರವಸೆ ನಿಡುತ್ತಿರುವ ಉತ್ತಮ ಯೋಜನೆಯಗಿದೆ. ಈ ಯೋಜನೆಯ ಅಡಿಯಲ್ಲಿ ಬರುವ ರೈತರ ಜೀವನಶೈಲಿ ಸುಧಾರಿಸುವಲ್ಲಿ ಈ ಯೋಜನೆಯೂ ಸಹಕಾರಿಯಾಗಿರುವುದರಿಂದ ವಿವಿಧ ಸೂಚ್ಯಾಂಕಗಳಲ್ಲಿ ಭಾರತದ ಶ್ರೇಯಾಂಕವು ಉತ್ತಮಗೊಳ್ಳುತ್ತಿದೆ. ಅಂತಿಮವಾಗಿ ರೈತರು ಬಡತನವೆಂಬ ವಿಷವರ್ತುಲದಿಂದ ಹೊರಬರುತ್ತಾರೆ. ಈ ಫಸಲ್ ಬಿಮಾ ಯೊಜನೆಯು ನಿಜವಾಗಿಯೂ ರೈತರನ್ನು ಜಾಗತಿಕ ಮಟ್ಟದಲ್ಲಿ ಮುನ್ನಡೆಸಲು ಸಹಕರಿಸುತ್ತದೆ. ಇದಲ್ಲದೆ ಆತ್ಮಹತ್ಯ ಪ್ರಕರಣಗಳು ಕಡಿಮೆಯಾಗುವುದರಲ್ಲೂ ಸಹಕರಿಸುವುದರಿಂದ ಸಂಸಾರಗಳು ಚುರಾಗುವುದು ತಪ್ಪಿಸುತ್ತದೆ. ಮುಖ್ಯವಾಗಿ ರೈತರಿಗೆ ರಕ್ಷಣೆ ನೀಡಿದರೆ ಅವರು ಬೆಳೆಯನ್ನು ಉತ್ತಮ ರೀತಿಯಲ್ಲಿ ಬೆಳೆಸಲು ಸಧ್ಯಾವಾಗುತ್ತದೆ. ಮತ್ತು ಉತ್ಪಾದನೆಯ ಪ್ರಮಾಣವು ಸಹ ಹೆಚ್ಚುತ್ತದೆ

**ಉಲ್ಲೇಖಗಳು.**


- ಅನ್ನದಾತನ ಮನೆಯಲ್ಲಿ ವಿದ್ಯಾ ದೀಪ ಬೆಳಗಿಸಲು ಮುಂದಾದ ರಾಜ್ಯ ಸರ್ಕಾರ, ಉಮೇಶ್ ಕೋಲಿಗೆರೆ, ಜನಪದ ಸಂಪುಟ–05, ಸಂಚಿಕೆ–01, ಅಕ್ಟೋಬರ್ 2021.
- ಕರ್ನಾಟಕ ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2021, ಬೆಂಗಳೂರು.
- ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ, ಪ್ರಮೋದ್ ಮೋಹನ್ ಕವಟಿ, ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸಪತ್ರಿಕೆ, ಡಿಸೆಂಬರ್ 2019, ಬೆಂಗಳೂರು.
- ಚುರುಕಾದ ಕೃಷಿ ಚಟುವಟಿಕೆಯಿಂದ ಹೆಚ್ಚಿದ ಅವಕಾಶಗಳು, ಉಮೇಶ್ ಕೊಲಗೆರೆ ಜನಪದ ಪುಟ– 19, ಜುಲೈ 2020.
- https://www.bajajallianz.com/kannada/pradhan-mantri-fasal-bima-yojana.html